| District :Mysore | State : Karnataka |
|---|---|

# Department of Fisheries

## 2006-07 ನೇ ಸಾಲಿನ ಮೀನುಗಾರಿಕೆ ಇಲಾಖೆಯ ಕ್ರಿಯಾ ಯೋಜನೆಯ ಸಂಕ್ಷಿಪ್ತ ಟಿಪ್ಪಣಿ

### 1.ಮೀನುಮರಿ ಉತ್ಪಾದನೆ ಸಾಕಣೆ ಮತ್ತು ಹಂಚಿಕೆ(2405-00-101-0-72)

ಜಿಲ್ಲೆಯಲ್ಲಿ ಲಭ್ಯವಿರುವ ಸುಮಾರು 102 ದೊಡ್ಡ ಕೆರೆಗಳು, 975 ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಸಣ್ಣ ಕೆರೆಗಳನ್ನು ಮತ್ತು 3 ಜಲಾಶಯಗಳನ್ನು ಅಭಿವೃದ್ಧಿ ಪಡಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ. ಈ ಯೋಜನೆಯಡಿ ಕೆರೆಗಳನ್ನು ಸರ್ಕಾರಿ ಆದೇಶದಂತೆ ಗುತ್ತಿಗೆ ಅಥವಾ ಟೆಂಡರ್ ಕಂ ಹರಾಜು ಮುಖಾಂತರ ವಿಲೇವಾರಿ ಮಾಡಿ ಸದರಿ ಕೆರೆಗಳಲ್ಲಿ ಫಲಾನುಭವಿಗಳಿಗೆ ಬೇಕಾದ ಮೀನುಮರಿ ದಾಸ್ತಾನು ಮಾಡಲಾಗುತ್ತದೆ. ಬೇಕಾದ ಮೀನುಮರಿಗಳನ್ನು ಜಿಲ್ಲಾ ಪಂಚಾಯ್ತಿ ಮೀನುಮರಿ ಉತ್ಪಾದನಾ ಕೇಂದ್ರ ಕಬಿನಿ, ತಾಲ್ಲೂಕು ಮಟ್ಟದ ಪಾಲನಾ ಕೊಳಗಳಲ್ಲಿ ಬೆಳಸಿ ಅಥವಾ ಇಲಾಖೆಯಿಂದ ಅನುಮೋದಿಸಿದ ಖಾಸಗಿ ಮೀನುಮರಿ ಉತ್ಪಾದನಾ ಕೇಂದ್ರಗಳಿಂದ ,. ಕರ್ನಾಟಕ ಸಹಕಾರಿ ಮೀನುಗಾರಿಕೆ ಮಹಾಮಂಡಳಿ ಮೈಸೂರು ರವರಿಂದ ಖರೀದಿಸಿ ಕೆರೆಗಳಿಗೆ ಸರಬರಾಜು ಮಾಡಲಾಗುತ್ತದೆ. ಹಾಗೂ ಈ ಮೀನುಮರಿ ಬೆಲೆಯನ್ನು ಫಲಾನುಭವಿಗಳಿಂದ ವಸೂಲಿ ಮಾಡಿ ಸರ್ಕಾರಕ್ಕೆ ಜಮಾ ಮಾಡಲಾಗುತ್ತದೆ. ಮೀನುಮರಿ ಉತ್ಪಾದನೆ, ಪಾಲನೆ ಮತ್ತು ಹಂಚಿಕೆ ಲೆಕ್ಕ ಶೀರ್ಷಿಕೆಯಡಿ ಲಭ್ಯವಿರುವ ಅನುದಾನದಿಂದ ಫಲಾನುಭವಿಗಳಿಗಾಗಿ ಮೀನುಮರಿಗಳನ್ನು ಖರೀದಿಸಿದ ಫಾರಂಗಳಿಗೆ ಹಣ ಪಾವತಿಸಲಾಗುವುದು. ಸದರಿ ವರ್ಷದಲ್ಲಿ ಮೈಸೂರು ಜಿಲ್ಲೆಯಲ್ಲಿ ಈ ಯೋಜನೆಯಡಿ ಒಟ್ಟು ರೂ 7.00 ಲಕ್ಷ ಅನುದಾನವಿದ್ದು 35 ಲಕ್ಷ ಬೆರಳುಗಾತ್ರದ ಮೀನುಮರಿ ಸರಬರಾಜು ಮಾಡುವ ಗುರಿಯುದ್ದು ಪೆಬ್ರವರಿ 2007ರ ಅಂತ್ಯಕ್ಕೆ 39 ಲಕ್ಷ ಬಿತ್ತನೆ ಮೀನುಮರಿ ವಿವಿಧ ಭೂ ಸ್ವಾವರ ಗಳಲ್ಲಿ ಬಿತ್ತನೆ ಮಾಡಲಾಗಿದೆ.

ಈ ಯೋಜನೆಯಡಿ ಕಬಿನಿಯಲ್ಲಿರುವ ಮೀನುಮರಿ ಉತ್ಪಾದನೆ ಕೇಂದ್ರಕ್ಕೆ ಬೇಕಾದ ಗೊಬ್ಬರ ಖರೀದಿ ಮೀನುಮರಿಗೆ ಆಹಾರ ಖರೀದಿ, ಮೀನುಮರಿ ಖರೀದಿ, ಉತ್ಪಾದನಾ ಕೇಂದ್ರ ಔಷಧಿಗಳು ಪ್ಲಾಸ್ಟಿಕ್ ಚೀಲ,. ಅಮ್ಲಜನಕ ಖರೀದಿ, ವಿದ್ಯತ್ ಬಿಲ್ಲು ಕಛೇರಿ ವಾಹನದ ನಿರ್ವಹಣೆ ಮತ್ತು ರಿಪೇರಿ ಕೆರೆಗಳ ಇಸ್ತಿಹಾರ್ ಪ್ರಕಟಣೆ ಹಾಗೂ ಉತ್ಪಾದನಾ ಮತ್ತು ಪಾಲನಾ ಕೇಂದ್ರಗಳ ದುರಸ್ತಿ ನಿರ್ವಹಣೆ ಹಾಗೂ ದಿನಗೂಲಿ ನೌಕರರ ವೆಚ್ಚವನ್ನು ಭರಿಸಬೇಕಾಗುತ್ತದೆ.

### 2) ಪ್ರದರ್ಶನಗಳು ಮತ್ತು ತರಬೇತಿ: 2405-00-800-0-73

ಈ ಯೋಜನೆಯಡಿ ರೂ 0.30 ಲಕ್ಷಗಳ ಅನುದಾನವಿದ್ದು ತಾಲ್ಲೂಕು ಮಟ್ಟದಲ್ಲಿ ಮತ್ತು ಜಿಲ್ಲೆಯಲ್ಲಿ ವಸ್ತು ಪ್ರದರ್ಶನವನ್ನು ಮಾಡಿ ಸಾರ್ವಜನಿಕರಿಗೆ ಇಲಾಖೆ ಕಾರ್ಯಕ್ರಮಗಳ ಬಗ್ಗೆ ತಿಳುವಳಿಗೆ ನೀಡಲಾಗುವುದು ಹಾಗೂ ಮೀನುಗಾರಿಕೆಗೆ ಸಂಬಂಧಿಸಿದ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು.

**3. ಒಳನಾಡು ಮೀನುಗಾರಿಕೆಗೆ ಸಹಾಯಧನ 2405-00-101-0-65**

**3 (ಎ) ಗ್ರಾಸ್ ಕಾರ್ಪ್ ಮೀನುನಮರಿಗೆ ಸಹಾಯಧನ:**

ಈ ಸಾಲಿಗೆ ಸದರಿ ಯೋಜನೆಯಡಿಯಲ್ಲಿ ರೂ 0.50 ಲಕ್ಷಗಳ ಅನುದಾನದ ಗುರಿಯಿದೆ ಮತ್ತು 2.50 ಲಕ್ಷ ಮೀನುಮರಿಗಳನ್ನು ಸರಬರಾಜು ಮಾಡಲು ಗುರಿಯಿರುತ್ತದೆ. ಕೆರೆಗಳಲ್ಲಿ ಜಲಸಸ್ಯಗಳು ಹೆಚ್ಚು ಬೆಳೆದಿದ್ದು ಮೀನು ಬೆಳೆಯಲು ಹಾಗೂ ಹಿಡುವಳಿ ಮಾಡಲು ಕಷ್ಟವಾಗುತ್ತಿದ್ದು ಪಾಲನೆ ಮಾಡುವ ಮೀನುಗಳಲ್ಲಿ ಹುಲ್ಲುಗೆಂಡೆ ಜಾತಿಯ ಮೀನುಮರಿಗಳನ್ನು ಸದರಿ ಕೆರೆಗಳಲ್ಲಿ ದಾಸ್ತಾನು ಮಾಡಿದಾಗ ಜಲಸಸ್ಯಗಳನ್ನು ಕಡಿಮೆ ಮಾಡಲು ಅನುಕೂಲವಾಗುತ್ತದೆ. ಈ ಜಾತಿಯ ಮೀನುಮರಿ ಬೆಲೆ ತೀರಾ ಹೆಚ್ಚಾಗಿದ್ದು (1000 ಕ್ಕೆ 400/- ರೂ) ಈ ಯೋಜನೆಯಡಿಯಲ್ಲಿ ಶೇಕಡ 50 ರಷ್ಟು ಸಹಾಯಧನವನ್ನು ಫಲಾನುಭವಿಗಳಿಗೆ ನೀಡಲಾಗುವುದು

**3) (ಬಿ) ಚೌಗು ಮತ್ತು ಚೌಳು ಬೂಮಿಯಲ್ಲಿ ಮೀನು ಕೃಷಿ ಕೊಳ ನಿರ್ಮಾಣ ಸಹಾಯಧನ**

ಫಲಾನುಭವಿಗಳು ಸ್ವಂತ ಚೌಳು ಮತ್ತು ಚೌಗು ಜಮೀನಿನಲ್ಲಿ 1 ಎಕರೆ ಮೀನು ಕೃಷಿ ಕೊಳ ನಿರ್ಮಿಸಿದಲ್ಲಿ ಅವರಿಗೆ ತಲಾ ರೂ 30000/ ನೀಡಲಾಗುವುದು. 2006-07 ನೇ ಸಾಲಿನಲ್ಲಿ 2 ಕೊಳ ನಿರ್ಮಿಸುವ ಗುರಿ ಇದ್ದು ಅದನ್ನು ಸಾಧಿಸಲಾಗಿದೆ

**3(ಸಿ) ಮೀನುಗಾರಿಕಾ ಸಾಮಗ್ರಿಗಳಗಾಗಿ ಸಹಾಯಧನ (ಒಳನಾಡು)**

ಈ ಯೋಜನೆಯಡಿ ರೂ 0.57 ಲಕ್ಷ ಅನುದಾನದ ಗುರಿಯಿರುತ್ತದೆ. ಹಾಗೂ 57 ಜನ ಮೀನುಗಾರರಿಗೆ ಸಹಾಯಧನ ಕೊಡುವ ಗುರಿಯಿದೆ. ಬಡ ಮೀನುಗಾರರು ರೂ 3000/– ಬೆಲೆಯ ಮೀನುಗಾರಿಕೆ ಸಲಕರಣೆಗಳಾದ ಬಲೆ ಹರಿಗೋಲುಗಳನ್ನು ಖರೀದಿಸಿದಾಗ ಅವರಿಗೆ ಪ್ರತಿಯೊಬ್ಬರಿಗೆ ತಲಾ ರೂ 1000/– ಕ್ಕೆ ಮೀರದಂತೆ ಸಹಾಯಧನ ನೀಡಲಾಗುವುದು.

## 4)ಕೇಂದ್ರ ಮೀನು ಸಾಕಣೆದಾರರ ಅಭಿವೃದ್ಧಿ ಸಂಸ್ಥೆ: (2405–00–101–0–54)

ಸದರಿ ಯೋಜನೆಯಲ್ಲಿ ಈ ಸಾಲಿಗೆ ರೂ 19.19 ಲಕ್ಷಗಳ ಅನುದಾನದ ಗುರಿಯಿರುತ್ತದೆ. ಈ ಯೋಜನೆಯು ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆಯಲ್ಲಿ ಅನುಷ್ಠಾನಗೊಳಿಸುತ್ತಾರೆ. ಈ ಸಂಸ್ಥೆಯು 1973–74 ನೇ ಸಾಲಿನ ಕೇಂದ್ರ ಸರ್ಕಾರದ ಯೋಜನೆಯಡಿ ಸ್ಥಾಪಿತವಾಗಿರುತ್ತದೆ. 25 ಎಕರೆಗಿಂತ ಕಡಿಮೆ ಜಲ ವಿಸ್ತೀರ್ಣವುಳ್ಳ ಗ್ರಾಮ ಪಂಚಾಯ್ತಿ ಕೆರೆಗಳನ್ನು ಅಭಿವೃದ್ಧಿ ಪಡಿಸುವುದು ಈ ಸಂಸ್ಥೆಯ ಕೆಲಸವಾಗಿರುತ್ತದೆ. ಈ ಯೋಜನೆಯಡಿಯಲ್ಲಿ ನಿರುದ್ಯೋಗಿ ಗ್ರಾಮಸ್ಥರನ್ನು ಹಾಗೂ ಹಾಲಿ ಮೀನುಗಾರರನ್ನು ಗುರ್ತಿಸಿ ಮೀನುಗಾರಿಕೆಯಲ್ಲಿ ತರಬೇತಿ ನೀಡಿ ಸಣ್ಣ ಕೆರೆಗಳನ್ನು 5 ವರ್ಷಗಳ ಅವಧಿಗೆ ಗುತ್ತಿಗೆ ನೀಡಿ ಅಭಿವೃದ್ಧಿ ಪಡಿಸಲಾಗುವುದು. ಸದರಿ ಯೋಜನೆಯಲ್ಲಿ ಭೌತಿಕವಾಗಿ 10.00 ಲಕ್ಷ ಮೀನುಮರಿಗಳನ್ನು ಉತ್ಪಾದನೆ ಮಾಡುವ ಹಾಗೂ 15.00 ಲಕ್ಷ ಮೀನುಮರಿಗಳನ್ನು ದಾಸ್ತಾನು ಮಾಡಿ ಸರಬರಾಜು ಮಾಡುವ ಗುರಿಯಿರುತ್ತದೆ.

**ಜಿಲ್ಲಾ ಪಂಚಾಯತ್, ಮೈಸೂರು**

**2006–07 ನೇ ಸಾಲಿನ ಯೋಜನಾ ಕಾರ್ಯಕ್ರಮಗಳಡಿಯಲ್ಲಿ ಆರ್ಥಿಕ ಮತ್ತು ಭೌತಿಕ ಗುರಿ ಹಾಗೂ ಸಾಧನೆಗಳ ಪ್ರಗತಿ ವರದಿ(ಎಂಎಂಆರ್)**

**ಮಾಹೆ: ಫೆಬ್ರವರಿ 2007** **ಮೈಸೂರು ಜಿಲ್ಲೆ**

| ಕ್ರ ಸಂ | ಯೋಜನೆ : ಲೆಕ್ಕ ಶೀರ್ಷಿಕೆ | ಘಟಕ | ವಾರ್ಷಿಕ ಗುರಿ | | ಜಿ.ಪಂ ನಿಂದ ಬಿಡುಗಡೆ ಯಾದ ಅನುದಾನ | ಸಂಚಿತ ಗುರಿ | | | | | | ಷರಾ |
|---|---|---|---|---|---|---|---|---|---|---|---|---|
| | | | | | | ಆರ್ಥಿಕ | | | ಭೌತಿಕ | | | |
| | | | ಆರ್ಥಿಕ | ಭೌತಿಕ | | ಗುರಿ | ಸಾಧನೆ | ಶೇಕಡ | ಗುರಿ | ಸಾಧನೆ | ಶೇಕಡ | |
| 1 | ಮೀನುಮರಿ ಉತ್ಪಾದನೆ ಪಾಲನೆ ಮತ್ತು ಹಂಚಿಕೆ 2405–00–101–0–72 | ಲಕ್ಷ | 7.00 | 20.00 | 6.98 | 6.70 | 5.82 | 87 | 19.50 | 30.39 | >100 | |
| | | | | | | | | | | | | |

| | | | | | | | | | | | |
|---|---|---|---|---|---|---|---|---|---|---|---|
| 2 | ಮೀನುಗಾರಿಕೆ ಸಾಮಗ್ರಿಗಳಿಗಾಗಿ ಸಹಾಯಧನ (ಒಳನಾಡು)<br>2405–00–101–0–65 | ಲಕ್ಷ | 0.57 | 57 | | 0.57 | 0.31 | 54 | 57 | 31 | 54 | ಫಲಾನುಭವಿಗಳಅಯ್ಕೆ ಯಾಗಿದ್ದು ಗ್ರಾಮ ಸಭೆ ಅನುಮೋದನೆ ನಿರೀಕ್ಷಿಸಲಾಗಿದೆ |
| 3 | ಗ್ರಾಸ್ ಕಾರ್ಪ್ ಮೀನುಮರಿ ಸರಬರಾಜಿಗೆ ಸಹಾಯಧನ<br>2405–00–101–0–65 | ಲಕ್ಷ | 0.50 | 2.50 | 1.67 | 0.50 | 0.50 | 100 | 2.50 | 2.50 | 100 | |
| 4 | ಮೀನುಗಾರಿಕೆ ಆಬಿವೃದ್ದಿಗಾಗಿ ಸಹಾಯಧನ<br>2405–00–101–0–65 | ಲಕ್ಷ | 0.60 | 2 | | 0.60 | 0.30 | 50 | 2 | 1 | 50 | ಫಲಾನುಭವಿಗಳಅಯ್ಕೆ ಯಾಗಿದ್ದು ಗ್ರಾಮ ಸಭೆ ಅನುಮೋದನೆ ನಿರೀಕ್ಷಿಸಲಾಗಿದೆ |
| 5 | ವಸ್ತು ಪ್ರದರ್ಶನ ಮತ್ತು ತರಬೇತಿ<br>2405–00–800–0–73 | ಲಕ್ಷ | 0.30 | 3 | 0.30 | 0.30 | - | - | 3 | 1 | 33 | ಭೌತಿಕ ಪ್ರಗತಿ ಆಗಿದೆ. ಆರ್ಥಿಕ ಪ್ರಗತಿ ಪೆಬ್ರವರಿ ತಿಂಗಳಲ್ಲಿ ಆಗಲಿದೆ |
| 6 | ಮೀನು ಮಾರುಕಟ್ಟೆ ಮತ್ಸ್ಯ ವಾಹಿನಿಗೆ ಸಹಾಯಧನ<br>2405–00–105–0–08 | ಲಕ್ಷ | 0.12 | 9 | 0.12 | 0.12 | 0.0375 | 31 | 9 | 3 | 33 | ಫಲಾನುಭವಿಗಳಅಯ್ಕೆ ಯಾಗಿದ್ದು ಗ್ರಾಮ ಸಭೆ ಅನುಮೋದನೆ ನಿರೀಕ್ಷಿಸಲಾಗಿದೆ |
| 7 | ಮೀನು ಕೃಷಿಕರ ಆಭಿವೃದ್ದಿ ಸಂಸ್ಥೆ ನೆರವು<br>2405–00–101–0–54 | ಲಕ್ಷ | 19.19 | ಎ:10.00<br>ಬಿ 15.00 | 12.94 | 10.00 | 12.94 | >100 | 6.00<br>14.60 | 6.00<br>18.355 | 100<br>>100 | |
| | ಒಟ್ಟು | | 28.28 | | 22.01 | 18.79 | 19.9075 | >100 | | | | |